ಓ.ಎಸ್.ನಂಃ 236/2017

ಡಿಡಬ್ಲ್ಯೂ-1

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 04.02.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ನನ್ನ ತಾತನ ಹೆಸರು ಬೆಳ್ಳಶೆಟ್ಟಿ ಎಂದರೆ ಸರಿ. ನನ್ನ ತಾತನಿಗೆ ಮೂರು ಜನ ಮಕ್ಕಳು. ಅವರ ಹೆಸರು ಬೆಳ್ಳಶೆಟ್ಟಿ, ಸಿದ್ದಶೆಟ್ಟಿ ಮತ್ತು ಮಾದಶೆಟ್ಟಿ ಎಂದರೆ ಸರಿ. ಬೆಳ್ಳಶೆಟ್ಟಿ ನನ್ನ ತಂದೆ ಎಂದರೆ ಸರಿ. ನನ್ನ ತಂದೆ ದೊಡ್ಡೆಣ್ಣಮ್ಮ ಪೌತಿಯಾದ ನಂತರ ನನ್ನ ತಾಯಿಯನ್ನು ವಿವಾಹವಾದ ಬಗ್ಗೆ ನನಗೆ ಗೊತ್ತಿಲ್ಲ. ದಾವೆ ದಾಖಲಿಸಿದ ದಿನದಿಂದ ನನ್ನ ತಂದೆಗೆ ಇಬ್ಬರು ಪತ್ನಿಯರು ಇದ್ದ ಬಗ್ಗೆ ವಿಚಾರಿಸಿದ್ದೇನೆ, ಆದರೆ ನನ್ನ ತಂದೆಗೆ ಒಬ್ಬರು ಮಾತ್ರ ಪತ್ನಿ ಎಂದು ತಿಳಿಯಿತು. ನನ್ನ ತಂದೆ ಈಗ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿ. ನನ್ನ ತಂದೆಯನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲವಾ ಎಂದರೆ ಸಾಕ್ಷಿ ಅವರಿಗೆ ಕಿವಿ ಕೇಳಿಸುವುದಿಲ್ಲ, ಕಣ್ಣು ಕಾಣಿಸುವುದಿಲ್ಲ ಮತ್ತು ನಡೆದಾಡಲು ತೊಂದರೆ ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ ಸಾಕ್ಷಿ ನುಡಿಯಲು ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂದು ಆತನಿಗೆ ಆರೋಗ್ಯ ಸರಿಯಿಲ್ಲ ಎಂದು ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ವಾದಿಯ ತಾಯಿ ಅಂದರೆ ದೊಡ್ಡೆಣ್ಣಮ್ಮ ಮೊದಲನೇ ಪತ್ನಿ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ದೊಡ್ಡೆಣ್ಣಮ್ಮ ರವರಿಗೆ ಸಿದ್ದಮ್ಮ ಮಗಳು ಎಂದರೆ ಸರಿಯಲ್ಲ. ದೊಡ್ಡೆಣ್ಣಮ್ಮ ಜೀವಂತವಾಗಿ ಇದ್ದಾರಾ ಎಂದರೆ ಅವರು ಜಿವಂತವಾಗಿಲ್ಲ ಎಂದು ನುಡಿಯುತ್ತಾರೆ. ವಾದಿ ನಮ್ಮ ಗ್ರಾಮದಲ್ಲಿ ವಾಸವಾಗಿದ್ದಾರೆ. ವಾದಿಯ ತಂದೆ ತಾಯಿ ಯಾರು ಎಂದು ತಿಳಿಯಲು ನಾನು ಪ್ರಯತ್ನ ಮಾಡಿಲ್ಲ. ಸಿದ್ದಶೆಟ್ಟಿ ಮತ್ತು ಮಾದಶೆಟ್ಟಿ ನನ್ನ ಚಿಕ್ಕಪ್ಪಂದಿರು ಎಂದರೆ ಸರಿ. ಏಳನೇ ಪ್ರತಿವಾದಿ ಸಿದ್ದಶೆಟ್ಟಿಯ ಹೆಂಡತಿ ಎಂದರೆ ಸರಿ. ಅವರ ಮಕ್ಕಳು 8 ರಿಂದ 11ನೇ ಪ್ರತಿವಾದಿಗಳು ಎಂದರೆ ಸರಿ. ನನ್ನ ಮತ್ತೊಬ್ಬ ಚಿಕ್ಕಪ್ಪ ಮಾದಶೆಟ್ಟಿಯ ಹೆಂಡತಿ 12ನೇ ಪ್ರತಿವಾದಿ ಎಂದರೆ ಸರಿ. ಪ್ರತಿವಾದಿ 13 ಮತ್ತು 14 ಅವರ ಮಕ್ಕಳು ಎಂದರೆ ಸರಿ. ದಾವಾ ಸ್ವತ್ತಿನ ಐಟಂ ನಂ.2 ರಿಂದ 8 ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಸದರಿ ಪಿತ್ರಾರ್ಜಿತ ಸ್ವತ್ತುಗಳ ಆದಾಯದಿಂದ ಐಟಂ ನಂ.1 ನ್ನು ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಐಟಂ ನಂ.2 ರಿಂದ 8 ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪಂದಿರ ನಡುವೆ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಭಾಗವಾಗಿದೆ ಎಂದು ನುಡಿಯುತ್ತಾರೆ. 1981 ರಲ್ಲಿ ಸದರಿ ವಿಭಾಗವಾಗಿದೆ. ವಿಭಾಗವಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಸರ್ವೇ ನಂಃ 342 ರಲ್ಲಿ 19 ಗುಂಟೆ ಮತ್ತು ಸರ್ವೇ ನಂಃ 345 ರಲ್ಲಿ 5 ಗುಂಟೆ ಮಾತ್ರ ನನ್ನ ತಂದೆ ಹಿಸ್ಸೆಗೆ ಬಂದಿದೆ. ಸರ್ವೇ ನಂಃ 342 ರಲ್ಲಿ 19 ಗುಂಟೆ ನನ್ನ ತಾಯಿ ಹೆಸರಿನಲ್ಲಿ ನಮೂದು ಇದೆ. ಸದರಿ ಜಮೀನು ನನ್ನ ತಾಯಿಗೆ ನನ್ನ ತಂದೆಯಿಂದ ಬಂದಿದೆ. ಆ ಬಗ್ಗೆ ಯಾವುದೆ ಲಿಖಿತ ದಾಖಲೆ ಇಲ್ಲ. ನನ್ನ ತಂದೆ ಹೆಸರಿಗೆ ಪ್ರಸ್ತುತ ಯಾವುದೆ ಜಮೀನು ಇಲ್ಲ. ಸಾಕ್ಷಿ ಮುಂದುವರೆದು ಸರ್ವೇ ನಂಃ 345 ರಲ್ಲಿ 5 ಗುಂಟೆ ಜಮೀನು ಇದೆ ಎಂದು ನುಡಿಯುತ್ತಾರೆ. ಅದನ್ನು ಹೊರತುಪಡಿಸಿ ಸರ್ವೇ ನಂಃ 342 ರಲ್ಲಿ 19 ಗುಂಟೆ ಮತ್ತು ನನ್ನ ತಾಯಿ ಸ್ವತಃ ಖರೀದಿ ಮಾಡಿರುವ ಸ್ವತ್ತು ಆಕೆ ಹೆಸರಿನಲ್ಲಿ ಇದೆ.

1978 ರಲ್ಲಿ ನನ್ನ ತಾಯಿ ಜಮೀನನ್ನು ಖರೀದಿ ಮಾಡಿರುತ್ತಾರೆ. ನನ್ನ ತಂದೆಗೆ ನಾಲ್ಕು ಜನ ಮಕ್ಕಳು. ಅವರ ಹೆಸರು ಮಸಣಮ್ಮ, ಶಿವಮ್ಮ, ಚಿಕ್ಕಬೆಳ್ಳಮ್ಮ ಮತ್ತು ನಾನು. ನನ್ನ ಹಿರಿಯ ಅಕ್ಕ ಮಸಣಮ್ಮನಿಗೆ 55 ವರ್ಷವಾಗಿರಬಹುದು. ನನ್ನ ತಾಯಿ ಒಟ್ಟು ಕುಟುಂಬದಲ್ಲಿ ಇದ್ದಾಗ 1978 ರಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಯ ತಾಯಿ ದೊಡ್ಡೆಣ್ಣಮ್ಮ ಯಾವಾಗ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ವಾದಿಗೆ ಯಾವುದೆ ಸ್ವತ್ತನ್ನು ಕೊಟ್ಟಿಲ್ಲ. ವಾದಿಗೆ ಆಸ್ತಿಗಳನ್ನು ಕೊಡಬೇಕಾಗುತ್ತದೆ ಎಂದು ನನ್ನ ತಂದೆ ನನ್ನ ತಾಯಿ ಹೆಸರಿಗೆ ಜಮೀನುಗಳನ್ನು ವರ್ಗಾಯಿಸಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.1 ನ್ನು ಒಟ್ಟು ಕುಟುಂಬದ ಸಂಪಾದನೆಯಿಂದ ಖರೀದಿ ಮಾಡಿರುವ ಕಾರಣ ವಾದಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಉಳಿದ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾದ ಕಾರಣ ಅವುಗಳಲ್ಲಿ ವಾದಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ.

ವಾದಿ ನನ್ನ ತಂದೆಯ ಮೊದಲನೇ ಹೆಂಡತಿಯ ಮಗಳಾದ ಕಾರಣ ಆಕೆಗೆ ದಾವಾ ಸ್ವತ್ತುಗಳಲ್ಲಿ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲ. ನಿಡಿ2 1 ಎಕರೆ ಗೆ ಮಾತ್ರ ಸಂಬಂಧಪಟ್ಟಿದೆ ಎಂದರೆ ಸಾಕ್ಷಿ ಅದು 2 ಎಕರೆಗೆ ಸಂಬಂಧಪಟ್ಟಿದೆ ಎಂದು ನುಡಿಯುತ್ತಾರೆ. ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ನಿಡಿ2 ರಲ್ಲಿ 1 ಎಕರೆ ನಮೂದಿಸಿದೆ ಎಂದರೆ ಸಾಕ್ಷಿ ಅದು 2 ಎಕರೆ ಎಂದು ನಮೂದಾಗಬೇಕಿತ್ತು ಎಂದು ನುಡಿಯುತ್ತಾರೆ. ಚೆಕ್ಕುಬಂದಿಯನ್ನು ನೋಡಿದ ನಂತರ ನಿಡಿ2 ರ ವಿಸ್ತೀರ್ಣ 1 ಎಕರೆ ಎಂದು ತಪ್ಪಾಗಿ ನಮೂದಾಗಿದೆ ಎಂದು ತಿಳಿಯಿತು. ಸುಮಾರು 10 ವರ್ಷಗಳ ಹಿಂದೆ ಸದರಿ ತಪ್ಪು ನಮಗೆ ತಿಳಿದಿರುತ್ತದೆ. ಸದರಿ

ವಿಷಯ ನಮಗೆ ತಿಳಿದ ನಂತರ ನಿಡಿ2 ರಲ್ಲಿ ವಿಸ್ತೀರ್ಣವನ್ನು ಸರಿಪಡಿಸಿಡಿಕೊಡಲು ಅದರ ಮಾರಾಟಗಾರರಿಗೆ ಮನವಿ ಮಾಡಿಲ್ಲ. ದಾವಾ ಹಾಕಿದ ನಂತರ ಸದರಿ ವಿಸ್ತೀರ್ಣವನ್ನು ಸರಿಪಡಿಸಲು ಪ್ರಯತ್ನ ಮಾಡಿಲ್ಲ.

ಐಟಂ ನಂ.1 ಕ್ಕೆ ಆರ್.ಟಿ.ಸಿ ಯಲ್ಲಿ 2 ಎಕರೆ ಎಂದು ನಮೂದು ಇದೆ ಎಂದರೆ ಸರಿ. ದಾವಾ ದಾಖಲಿಸುವ ಪೂರ್ವದಲ್ಲಿ ವಾದಿ ನನ್ನ ತಂದೆಗೆ ಪಾಲು ಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಪಾಲು ತಿರಸ್ಕರಿಸಿದ ಕಾರಣ ಈ ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ. ವಾದಿ ನನ್ನ ತಂದೆಯ ಮೊದಲನೇಯ ಹೆಂಡತಿಯ ಮಗಳಲ್ಲ ಎಂದು ಪಂಚಾಯಿತಿ ಮಾಡಿ ವಿಚಾರ ಮಾಡಲು ತೊಂದರೆ ಇರಲಿಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು ಅವುಗಳು ಇಂದಿಗೂ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಈ ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ. ವಾದಿಗೆ ಪಾಲುಕೊಡಬೇಕಾಗುತ್ತದೆ ಎಂದು ವಾಸ್ತವಾಂಶಗಳನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿದ್ದು, ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ವಾಸ್ತವಾಂಶ ಹೊರಬರುತ್ತದೆ ಎಂದು ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ